ಧಾರವಾಡ ಜಿಲ್ಲೆಯ ನವಲಗುಂದಕ್ಕೆ ವಿಶ್ವಮಾನ್ಯತೆ ತಂದುಕೊಟ್ಟ ಧುರಿ, ಮಹಿಳಾ ಸ್ವಾವಲಂಬನೆ ಜೊತೆಗೆ ಪ್ರಾಚೀನ ಪರಂಪರೆಗೂ ಸಾಕ್ಷಿಯಂತೆ ನಿಂತಿವೆ.

■ ಗೋವರ್ಧನ ಎಸ್.ಎನ್.

# ಸೊಬಗಿನ ಐಸಿರಿ; ನವಲಗುಂದ ಧುರಿ



ಧಾರವಾಡ ವಿಶೇಷ

ಬಹುರೂಪಿ ವಿನ್ಯಾಸ, ಗಾಢ ರಂಗಿನ ಚೆಲುವು, ಸದೃಢ ಚಹರೆಯಿಂದ ನೋಡಿದಾಕ್ಷಣ ಥಟ್ಟನೆ ಸೆಳೆಯುವ ಈ ಸುಂದರಿಯ ಹೆಸರು 'ನವಲಗುಂದ ಧುರಿ' (ಜಮಖಾನ).

ಧಾರವಾಡ ಜಿಲ್ಲೆಯ ನವಲಗುಂದಕ್ಕೆ ವಿಶ್ವಮಾನ್ಯತೆ ತಂದುಕೊಟ್ಟ ಧುರಿಗಳು ಮಹಿಳಾ ಸ್ವಾವಲಂಬನೆ ಜೊತೆಗೆ ಪ್ರಾಚೀನ ಪರಂಪರೆಗೆ ಸಾಕ್ಷಿಯಾಗಿವೆ. ತಮ್ಮ ವಿಶೇಷತೆಯಿಂದ ಇಂದಿಗೂ ಬಹು ಬೇಡಿಕೆ ಹೊಂದಿವೆ. 2011ರಲ್ಲಿ ಭೌಗೋಳಿಕ ಮಾನ್ಯತೆ ಪಡೆದಿದ್ದು, ಯುನೆಸ್ಕೋದಿಂದ ಅಳಿವಿನಂಚಿನಲ್ಲಿರುವ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

## ಧುರಿ ತಯಾರಿ

ನವಲಗುಂದದ ಗವಿಮಠದ ಬಳಿ ಇರುವ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ (ಕಾವೇರಿ ಎಂಪೋರಿಯಂ) ಘಟಕದಲ್ಲಿ ಸುಂದರ ಧುರಿಗಳು ರೂಪ ತಳೆಯುತ್ತವೆ. ಮೊದಲು ಹತ್ತಿ ಹಾಗೂ ಉಣ್ಣೆಯ ನೂಲುಗಳನ್ನು ಬಿಡಿಸಲಾಗುತ್ತದೆ. ಧುರಿಗಳ ಅಳತೆಗೆ ತಕ್ಕಂತೆ ಕೇಂದ್ರದಲ್ಲಿ, ಇಲ್ಲವೇ ಮೈದಾನದಲ್ಲಿ ನೂಲು ಹರಡಲಾಗುತ್ತದೆ. ದೊಡ್ಡ ಅಳತೆಯ ಧುರಿಗೆ ಬಳಸುವ ನೂಲು ನವಲಗುಂದದಿಂದ ಹುಬ್ಬಳ್ಳಿಗಿರುವ ದೂರದಷ್ಟು ಉದ್ದ ಇರುತ್ತದೆ ಎಂಬುದು ಘಟಕದ ಮಹಿಳೆಯರ ಲೆಕ್ಕಾಚಾರದ ಮಾತು.



ಉದ್ದದ ನೂಲುಗಳನ್ನು ನೇಯ್ದು, ಧುರಿಯಾಗಿಸುವ ಪ್ರಕ್ರಿಯೆ ನಿಜಕ್ಕೂ ನಿಬ್ಬೆರಗಾಗಿಸುತ್ತದೆ. ಮೂಲ ನೂಲಾದ ಗಂಜಾವನ್ನು ಖದಾಯ್ ಹೆಸರಿನ ಲಂಬವಾದ ನೇಯ್ಗೆ ಯಂತ್ರಕ್ಕೆ ಎಳೆ ಎಳೆಯಾಗಿ ಸಿಕ್ಕಿಸಿ, ನಡು ನಡುವೆ ವರ್ಣಮಯವಾದ 'ಗುಲ್ಫ' ನೂಲುಗಳನ್ನು ಹೆಣೆದು, ಪಂಜಾದಿಂದ ಬಿಗಿಗೊಳಿಸಲಾಗುತ್ತದೆ. ಇದರ ಜೊತೆಗೆ ಚಿತ್ತಾರವನ್ನು ನಿರ್ದಿಷ್ಟ ಅಳತೆಗೆ ಅನುಸಾರ ಹೆಣೆಯುವುದು ಇಲ್ಲಿನ ಕಾರ್ಮಿಕರ ಅಗಾಧ ಕೌಶಲಕ್ಕೆ ಹಿಡಿದ ಕನ್ನಡಿ.

> ನಾನು ತರಬೇತಿ ಪಡೆಯುವ ಕಾಲಕ್ಕೆ ಈ ಕೇಂದ್ರದಲ್ಲಿ 150ಕ್ಕೂ ಹೆಚ್ಚು ಜನರು ಜಮಖಾನ ತಯಾರಿಸುತ್ತಿದ್ದರು. ಕ್ರಮೇಣ ಈ ಸಂಖ್ಯೆ ಕುಸಿಯುತ್ತಾ ಬಂದಿದೆ. ಸದ್ಯ 17 ಮಂದಿ ಇದ್ದೇವೆ.
>
> **-ಫರ್ಜಾನ ಶಿರಸಂಗಿ**
>
> ಅಧ್ಯಕ್ಷೆ, ನವಲಗುಂದದ ನೇಕಾರರ ಸಂಘ

ಈ ಕೆಲಸ ಸಂಪೂರ್ಣಗೊಳ್ಳುವಷ್ಟರಲ್ಲಿ ಇವರು ಕಾರ್ಮಿಕರೆಂದಷ್ಟೇ ಅನಿಸುವುದಿಲ್ಲ, ಬದಲಾಗಿ ಅಪೂರ್ವ ಕಲಾವಿದರಂತೇ ಭಾಸವಾಗುತ್ತಾರೆ.

ಸಾಂಪ್ರದಾಯಿಕವಾದ ನವಿಲು, ವಜ್ರ, ನಕ್ಷತ್ರ, ಹೂವಿನ ವಿನ್ಯಾಸಗಳೊಂದಿಗೆ, ಆಧುನಿಕತೆಗೆ ತಕ್ಕಂತೆ ವಿವಿಧ ವಿನ್ಯಾಸಗಳನ್ನು ಇಲ್ಲಿನ ಮಹಿಳಾ ಕಾರ್ಮಿಕರು ಧುರಿಗಳಲ್ಲಿ ಮೂಡಿಸುತ್ತಾರೆ. ಅಳತೆಗೆ ತಕ್ಕಂತೆ ಧುರಿಗಳ ತಯಾರಿಯು ಎರಡು ದಿನದಿಂದ 20 ದಿನಗಳವರೆಗೆ ನಡೆಯುತ್ತದೆ.